96

154-330-96

**ಶ್ರೀ ಎಸ್ ಎಲ್ ಬೋಜೇಗೌಡ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 330ರ ಸೂಚನೆಯ ಮೇರೆಗೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ.**

**ಪ್ರಶ್ನೆ:-**

ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಆಡಳಿತಾತ್ಮಕ ಹಿತದೃಷ್ಟಿಯಿಂದ ಯಾವುದೇ ಇಲಾಖೆಯ ಅಧಿಕಾರಿಗಳನ್ನು ನೇಮಕ ಮಾಡುವಾಗ ನಿಯಮ / ನಿಯಮಾವಳಿಗಳನ್ನು ಹಾಗೂ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸದಂತೆ ಸದನದಲ್ಲಿ ಹಾಗೂ ಸಾರ್ವಜನಿಕವಾಗಿ ಅನೇಕ ಬಾರಿ ತಿಳಿಸಲಾಗಿರುತ್ತದೆ. ಆದರೆ ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರ ಹುದ್ದೆಗೆ ನೇಮಕ ಮಾಡುವಾಗ ನಾಗರಿಕ ಸೇವಾ ನಿಯಮ / ನಿಯಮಾವಳಿಗಳಲ್ಲಿ ಐಎಎಸ್ ಅಥವಾ ಕೆಎಎಸ್ (ಹಿರಿಯ ಶ್ರೇಣಿ) ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಸ್ಪಷ್ಟ ನಿರ್ದೇಶನವಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ಸಹ ಕೃಷಿ ಇಲಾಖೆಯಲ್ಲಿ ಜಂಟಿ ನಿರ್ದೇಶಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಯನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರ ಹುದ್ದೆಗೆ ನೇಮಕ ಮಾಡುವಾಗ ಯಾವ ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ ಎಂಬ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:** ಕೇಂದ್ರ ಸರ್ಕಾರವು ದಿನಾಂಕ: 10.06.2022ರ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಭಾರತ ಆಡಳಿತ ಸೇವಾ ವೃಂದಕ್ಕೆ ಸಂಬಂಧಿಸಿದಂತೆ 171 ಕೇಡರ್ ಹುದ್ದೆಗಳನ್ನು ನಿಗದಿಪಡಿಸಿರುತ್ತದೆ. ಸದರಿ ಹುದ್ದೆಗಳಿಗೆ ಭಾ.ಆ.ಸೇ. ಅಧಿಕಾರಿಗಳನ್ನು IAS (Cadre) Rules, 1954 ಮತ್ತು IAS (Pay) Rules, 2016 ರನ್ವಯ ನೇಮಿಸಲಾಗುತ್ತದೆ. ಅಲ್ಲದೇ ಭಾ.ಆ.ಸೇ ಅಧಿಕಾರಿಯಲ್ಲದ ಇತರೆ ವೃಂದದ ಅಧಿಕಾರಿಗಳನ್ನು IAS (Cadre) Rules, 1954ರ ನಿಯಮ 9ರಡಿ ನೇಮಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಭಾ.ಆ.ಸೇ ಅಥವಾ ಕೆ.ಎ.ಎಸ್ ವೃಂದದ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಮೀಸಲಿಸಿರುವ ಭಾ.ಆ.ಸೇ ಕೇಡರೇತರ ಹುದ್ದೆಗಳಿಗೆ ಅಧಿಕಾರಿಗಳ ಲಭ್ಯತೆ ಮತ್ತು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಹಾಗೂ ಸರ್ಕಾರಕ್ಕೆ ಇರುವ ಪ್ರದತ್ತವಾದ ಅಧಿಕಾರದನ್ವಯ ಆದೇಶಗಳನ್ನು ಹೊರಡಿಸಲಾಗುತ್ತದೆ.

**ಸಂಖ್ಯೆ ಸಿಆಸುಇ 706 ಆಸೇಇ 2024**

(ಸಿದ್ದರಾಮಯ್ಯ)

**ಮುಖ್ಯಮಂತ್ರಿ**